**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 461/2022 |
| ಸಿ.ಡಬ್ಲ್ಯೂ | 5 |
| ಪಿ.ಡಬ್ಲ್ಯೂ | 3 |

| | | |
|---|---|---|
| ಹೆಸರು | :- | ಕೃಷ್ಣಾ ಸಣ್ಣಪ್ಪಗೋಳ |
| ತಂದೆ/ಗಂಡನ ಹೆಸರು | :- | ಸಣ್ಣಪ್ಪ |
| ವಯಸ್ಸು | :- | 40 ವರ್ಷ |
| ಉದ್ಯೋಗ | :- | ಕೃಷಿ |
| ವಾಸಸ್ಥಳ | :- | ಮಳಲಿ |

ಸಾಕ್ಷಿಯನ್ನು ದಿಃ29.08.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ ರವರಿಂದ

1. ನಾನು ಮುಧೋಳ ಪೊಲೀಸ ಠಾಣೆಗೆ ಬೇರೆ ಕೆಲಸಕ್ಕೆ ಹೋಗಿದ್ದು, ಆಗ ಪೊಲೀಸರು ಇಲ್ಲಿಯೇ ಹೋಗಿ ಬರೋಣ ಎಂದು ನನ್ನನ್ನು ಮತ್ತು ಚಾಸಾ-4 ರವರನ್ನು ವಜ್ರಮಟ್ಟಿ ರಸ್ತೆಯಲ್ಲಿ ಇರುವ ಕೆನಾಲ ಕಡೆಗೆ ಹೋಗಿ ಛಾಯಾಚಿತ್ರ ತೆಗೆಸಿಕೊಂಡರು. ಆಗ ನಮ್ಮೊಂದಿಗೆ ಆರೋಪಿತರು ಹಾಜರ ಇದ್ದರು. ವಸ್ತುಗಳು ಇದ್ದು, ಅವುಗಳ ಕಡೆಗೆ ಬೆರಳು ಮಾಡಲು ಹೇಳಿ ಛಾಯಾಚಿತ್ರ ತೆಗೆದುಕೊಂಡರು. ಸಾಕ್ಷಿಗೆ ಈಗ ಮುಮಾ-1 ನ್ನು ತೋರಿಸುತ್ತಿದ್ದು, ಅದನ್ನು ಅವರು ಗುರುತಿಸುವುದಿಲ್ಲ. ಸಾಕ್ಷಿಗೆ ಈಗ 2 ಛಾಯಾಚಿತ್ರಗಳನ್ನು ತೋರಿಸುತ್ತಿದ್ದು, ಅವುಗಳಲ್ಲಿ ತಾನು ಇದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಛಾಯಾಚಿತ್ರಗಳೊಂದಿಗೆ ಕಲಂ.65(ಬಿ) ಅಡಿ ಪ್ರಮಾಣ ಪತ್ರ ಲಗತ್ತಿಸಿದ ಕಾರಣ ಸದರಿ ಛಾಯಾಚಿತ್ರಗಳನ್ನು ನಿಪಿ-3 ಮತ್ತು ನಿಪಿ-4 ಎಂದು, ಕಲಂ.65(ಬಿ) ಅಡಿ ಪ್ರಮಾಣ ಪತ್ರವನ್ನು ನಿಪಿ-5 ಎಂದು ಗುರುತಿಸಲಾಯಿತು. ಸದರಿ ಛಾಯಾಚಿತ್ರಗಳನ್ನು ಕೆನಾಲ್ ಹತ್ತಿರ ತೆಗೆದಿರುತ್ತಾರೆ. ಸಾಕ್ಷಿಗೆ ಈಗ ದಿಃ20.08.2022 ರ ಆರೋಪಿತನು ಕೃತ್ಯದಲ್ಲಿ ಉಪಯೋಗಿಸಿದ ಮಚ್ಚನ್ನು ಒಗೆದ ಸ್ಥಳದ ಪಂಚನಾಮೆಯನ್ನು ತೋರಿಸುತ್ತಿದ್ದು ಅದರ ಮೇಲೆ ಇರುವ ತಮ್ಮ ಸಹಿ ಗುರುತಿಸಿದ್ದರಿಂದ, ಸದರಿ ಪಂಚನಾಮೆಯನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತಃ ಮುಂದುವರೆದು ನನಗೆ ಅದರಲ್ಲಿ ಏನು ಬರೆದಿಲ್ಲ ಗೊತ್ತಿಲ್ಲ, ನನ್ನ ಕೆಲಸಕ್ಕೆ ಸಹಿ ಪಡೆಯುತ್ತಿದ್ದಾರೆ ಎಂದು ಸಹಿ ಮಾಡಿದೆ ಎಂದು ಹೇಳುತ್ತಾರೆ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಣಿಸಿ ಮಾನ್ಯ ಸ.ಸ.ಅ ರವರು ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದರಿಂದ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)**

**<u>ಪಾಟೀ ಸವಾಲು ಃಸ.ಸ.ಅ ರವರಿಂದ</u>**

1. ದಿಃ20.08.2022 ರಂದು ಆರೋಪಿತನು ಚಾಸಾ-1 ರವರಿಗೆ ಮಚ್ಚನ್ನು ತೋರಿಸಿ ಬಂಗಾರದ ಆಭರಣಗಳನ್ನು ದೋಚಿದ್ದು, ಅದಕ್ಕೆ ಸಂಬಂಧಿಸಿದಂತೆ ಸದರಿ ಮಚ್ಚನ್ನು ಒಗೆದ ಝುಂಜರಕೊಪ್ಪ ಗ್ರಾಮದ ಸರ್ವೆ ನಂ.146 ರ ಜಮೀನಿನಲ್ಲಿ ಆರೋಪಿತ ಸ್ಥಳ ತೋರಿಸಿದಂತೆ ನಿಮ್ಮ ಸಮಕ್ಷಮ ಪಂಚನಾಮೆ ಬರೆದರು ಎಂದರೆ ಘಟನೆಯ ಬಗ್ಗೆ ನನಗೆ ಯಾವುದೇ ವಿಷಯ ಗೊತ್ತಿಲ್ಲ, ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನೀವು ಪಂಚನಾಮೆ ಓದಿ ತಿಳಿದುಕೊಂಡು ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಶ್ರೀ.ಎಸ್.ಪಿ.ವಿ ವಕೀಲರಿಂದ ಆರೋಪಿ-1 ಪರವಾಗಿ</u>**

1. ಆರೋಪಿತನನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೀರಿ ಎಂದರೆ ಸರಿ. ಕೇವಲ ಪೊಲೀಸರು ಹೇಳಿದಂತೆ ನೀವು ಸ್ಥಳಕ್ಕೆ ಹೋಗಿದ್ದು, ಯಾವ ಕಾರಣಕ್ಕೆ ಹೋಗುತ್ತಿದ್ದೀರಿ ಎಂದು ನಿಮಗೆ ತಿಳಿಸಿಲ್ಲ ಎಂದರೆ ಸರಿ. ನಿಮ್ಮ ಮುಂದೆ ಮಚ್ಚನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿ.

ಆರೋಪಿ-2 ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**ಮರು ವಿಚಾರಣೆ ಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ